**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ ಮತ್ತು ಶ್ರೀ ಕೇಶವ ಪ್ರಸಾದ್ ಎಸ್. ರವರು ನಿಯಮ-330ರ ಅಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ**

ಪ್ರಶ್ನೆ: **ರಾಜ್ಯ ಸರ್ಕಾರವು ಮತಾಂತರ ನಿಷೇಧ ಕಾಯ್ದೆಯನ್ನು ಸಮಗ್ರವಾಗಿ ಜಾರಿಗೊಳಿಸುವಲ್ಲಿ ವಿಫಲವಾಗಿರುವುದು ಗಮನಿಸಬಹುದಾದಂತಹ ಸಂಗತಿ, ಹಲವು ಧರ್ಮಗಳಿರುವ ದೇಶ ನಮ್ಮದು. ಇಂತಹ ದೇಶದಲ್ಲಿ ಆಯಾ ಧರ್ಮಗಳಿಗಿರುವ ಅಸ್ಮಿತೆಯ ರಕ್ಷಣೆ ಆಗಬೇಕು. ಧರ್ಮ ಧರ್ಮಗಳ ನಡುವೆ ಪೈಪೋಟಿ ಆಗಬಾರದು. ಹಾಗೆ ಅಂತಹ ಸಂದರ್ಭ ನಿರ್ಮಾಣವಾದರೆ ಇಡೀ ಸಮಾಜದ ವ್ಯವಸ್ಥೆ ಕುಸಿದು ಬೀಳುತ್ತದೆ. ಒಂದು ಧರ್ಮದ ವ್ಯಕ್ತಿಗೆ ಕ್ಷಣಿಕ ಆಸೆ ತೋರಿಸಿ ಅವನು ಪರಂಪರಾಗತವಾಗಿ ಅನುಸರಿಸುತ್ತಾ ಬಂದಿರುವ ತನ್ನ ಧರ್ಮವನ್ನು ಬಿಡುವಂತೆ ಮಾಡುವುದು ಅಪರಾಧ ಆಗುತ್ತದೆ. ಅದಕ್ಕೆ ನೈತಿಕ ಸಮರ್ಥನೆ ಎಂಬುದು ಇಲ್ಲ. ಮತಾಂತರ ಸ್ವಂತ ಇಚ್ಛೆಯಿಂದ ಕೂಡಿರಬೇಕು. ಮತಾಂತರಕ್ಕೆ ಹಾಗೂ ಮತಾಂತರ ಪ್ರಕ್ರಿಯೆಗಳಿಗೆ ಸರಳವಾಗಿ ಬಲಿಯಾಗುವುದು ಬಡವರು, ನಿರ್ಗತಿಕರು ಅದರಲ್ಲೂ ಹೆಚ್ಚಾಗಿ ತಳಸಮುದಾಯಗಳ ಜನರು. ಮತಾಂತರ ಎಂಬ ಪೆಡಂಭೂತದಿಂದ ತಳಮಟ್ಟದಲ್ಲಿ ಜಾತಿಯ ಮೂಲ ಬುನಾದಿಯನ್ನು ಅಲುಗಾಡುತ್ತಿರುವುದಲ್ಲದೇ, ರಾಜಕೀಯ ಜಾತಿ ಸಮೀಕರಣ ಕೂಡಾ ಹೆಚ್ಚಾಗುತ್ತಿದೆ. ಮತಾಂತರ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ತರಹದ ಕಾರ್ಯಕ್ರಮಗಳನ್ನು ಯಾರೇ ಮಾಡಿದರೂ ಸಹ ಅದನ್ನು ತಡೆಯಬೇಕಾದಂತಹ ಆದ್ಯ ಕರ್ತವ್ಯವು ಸರ್ಕಾರದ್ದಾಗಿರುವುದರಿಂದ ಈ ವಿಚಾರದಲ್ಲಿ ಸರ್ಕಾರವು ಮುಂದಾಳತ್ವ & ಮುಂಜಾಗ್ರತೆ ಕ್ರಮಗಳನ್ನು ಅವಶ್ಯಕವಾಗಿ ಕೈಗೊಳ್ಳಬೇಕಾಗಿರುವ ಕುರಿತು.**

ಉತ್ತರ: ಮತಾಂತರ ನಿಷೇಧ ಕಾಯ್ದೆಯಾದ ಕರ್ನಾಟಕ ಧಾರ್ಮಿಕ ಸ್ವಾತಂತ್ರ ಹಕ್ಕು ಸಂರಕ್ಷಣಾ ಅಧಿನಿಯಮ, 2022 ರನ್ವಯ ಪ್ರಕರಣಗಳನ್ನು ದಾಖಲಿಸಿ ಕ್ರಮಕೈಗೊಳ್ಳಲಾಗುತ್ತಿರುತ್ತದೆ. ದಾಖಲಾದ ಪ್ರಕರಣಗಳ ವರ್ಷವಾರು ವಿವರ ಈ ಕೆಳಗಿನಂತಿರುತ್ತದೆ:-

| ಕ್ರ.ಸಂ. | ವರ್ಷ | ಕರ್ನಾಟಕ ಧಾರ್ಮಿಕ ಸ್ವಾತಂತ್ರ ಹಕ್ಕು ಸಂರಕ್ಷಣಾ ಅಧಿನಿಯಮ, 2022 ರನ್ವಯ ದಾಖಲಾದ ಪ್ರಕರಣಗಳ ಸಂಖ್ಯೆ |
|---|---|---|
| 1 | 2022 | 10 |
| 2 | 2023 | 13 |
| 3 | 2024 | 5 |

- ಈ ಕಾಯ್ದೆಯಲ್ಲಿ ತಿಳಿಸಿರುವಂತೆ ಪೊಲೀಸ್ ಠಾಣೆಗೆ ದೂರುಗಳು ಬಂದಾಗ ಯಾವುದೇ ವಿಳಂಬವಿಲ್ಲದೇ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.
- ಈ ಸಂಬಂಧ ವೈಜ್ಞಾನಿಕವಾಗಿ ತನಿಖೆ ನಡೆಸಿ ಸಾಕ್ಷಿಗಳನ್ನು ಕಲೆ ಹಾಕಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗುತ್ತಿದೆ.
- ಧರ್ಮಾಂತರದ ಮೊದಲು ಹಾಗೂ ನಂತರದ ಘೋಷಣೆ ಹಾಗೂ ತತ್ಸಂಬಂಧಿತ ವಿಚಾರಣೆಯನ್ನು ಬೇರೆ ಇಲಾಖೆಯ ಅಧಿಕಾರಿಗಳಿಗೆ ನೀಡಲಾಗಿದ್ದು, ಅವರು ಈ ಕಾಯ್ದೆಯಡಿಯಲ್ಲಿ ಯಾರಾದರೂ ಅಪರಾಧವೆಸಗಿದ್ದಲ್ಲಿ ಪೊಲೀಸರಿಗೆ ಆರೋಪಿತರ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಬಹುದಾಗಿರುತ್ತದೆ.

- ರಾಜ್ಯಾದ್ಯಂತ ಪೋಲೀಸ್ ಅಧಿಕಾರಿಗಳಿಗೆ ಹಾಗೂ ಅಧೀನ ಸಿಬ್ಬಂದಿಗಳಿಗೆ ಈ ಕಾಯ್ದೆಯ ಕುರಿತಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸೂಚಿಸಲಾಗಿದೆ.
- ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆ, ಯುವಜನ ಸಭೆ, ಮೊಹಲ್ಲ ಮೀಟಿಂಗ್, ನಾಗರೀಕ ಸಮಿತಿ ಸಭೆಗಳನ್ನು ನಡೆಸಿ ಸಾರ್ವಜನಿಕರಿಗೆ ಮತ್ತು ಯುವಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ ಹಾಗೂ ವೃತ್ತ ಉಪ ವಿಭಾಗ, ಜಿಲ್ಲಾ ಮಟ್ಟದಲ್ಲಿಯೂ ಸಹ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ.
- ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳು/ ಸಂಘಟನೆಗಳು/ಸಾಮಾಜಿಕ ಜಾಲತಾಣಗಳ ಬಗ್ಗೆ ಸತತ ನಿಗಾ ಇಡಲಾಗಿದೆ.

ಹೆಚ್‌ಡಿ 369 ಎಸ್‌ಎಸ್‌ಟಿ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು